## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್, ಬಸವನ ಬಾಗೇವಾಡಿ.

**ಸಿ.ಸಿ. 890/2019**

***ಪ್ರಾಸಃ 1***

***ಚಾಸಾಃ 12***

| | |
|---|---|
| **ಹೆಸರು** | ಬಸವರಾಜ ಬಿಸನಕೋಪ್ಪ |
| ಗಂಡನ **ಹೆಸರು** | ಭೀಮಪ್ಪ |
| **ವಯಸ್ಸು** | 40 ವರ್ಷ |
| **ವೃತ್ತಿ** | ಸ್ವಯಂ ನಿವೃತ್ತ ಸಿ.ಪಿ.ಐ |
| **ವಿಳಾಸ** | ರಾಯಭಾಗ |

**ಸಾಕ್ಷಿಯನ್ನು ಇಂದು ದಿನಾಂಕಃ 27.01.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**,

1. ನಾನು ದಿಃ 06.08.2018 ರಿಂದ ದಿಃ 27.12.2019 ರವರೆಗೆ ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 02.02.2019 ರಂದು ಸಂಜೆ 06.00 ಗಂಟೆಗೆ ನಾನು ಠಾಣಾ ಎಸ್.ಎಚ್.ಓ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನೆ ನಂಬರ್ 14/2019 ರಂತೆ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ.

3. ನಾನುದಿಃ 03.02.2019 ಬೆಳಿಗ್ಗೆ 09.15 ರಿಂದ 10.15 ಗಂಟೆಯವರೆಗೆ ಚಾಸಾ-1 ರವರು ತೋರಿಸಿದಂತೆ ಗಣಿ ಗ್ರಾಮದ ಚಾಸಾ-1 ರವರ ಮನೆಯ ಮುಂದಿನ ರಸ್ತೆಯ

ಮೇಲೆ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಕೃತ್ಯೆ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯ ಕಾಲಕ್ಕೆ ಛಾಯಾಚಿತ್ರವನ್ನು ತೆಗೆದಿರುತ್ತೇನೆ.

4. ಅದೇ ದಿನ ಚಾಸಾ-4 ರಿಂದ 10 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 20.02.2019 ರಂದು ಆರೋಪಪಿತರು ಮಾನ್ಯ ಜಿಲ್ಲಾ ನ್ಯಾಯಾಲಯಾದಿಂದ ನೀರಿಕ್ಷಣಾ ಜಾಮೀನಿನ ಆದೇಶ ಪ್ರತಿಯನ್ನು ತಂದು ಹಾಜರುಪಡಿಸಿದ್ದು, ಸದರಿ ಆರೋಪಿತರ ವಿರುದ್ದ ದಸ್ತಗಿರಿ ಕ್ರಮಗಳನ್ನು ಅನುಸರಿಸಿ ಮಾನ್ಯ ಜಿಲ್ಲಾ ನ್ಯಾಯಾಲಯದ ಆದೇಶದ ಪ್ರಕಾರ ಸೂಕ್ತ ಭದ್ರತೆಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ. ದಿಃ 13.03.2019 ರಂದು ಚಾಸಾ-4 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ-11 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ನಾನು ಆರೋಪಿತರ ವಿರುದ್ದ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

5. ಸಾಕ್ಷಿಯು ತಾವು ಸ್ವೀಕರಿಸಿದ ದೂರನ್ನು ಮತ್ತು ಸದರಿ ದೂರಿನ ಮೇಲೆ ಇರುವ ಚಾಸಾ-1 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ

ಸಹಿಯನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 4(ಎ) ಎಂದು ಗುರುತಿಸಲಾಯಿತು.

6. ನಾನು ಆರೋಪಿತರನ್ನು ನೋಡಿದರೆ ಗುರುತಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1,2 ಮತ್ತು 4ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ 3ನೇ ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು ಸದರಿ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ.

**ಪಾಟಿ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ ಆರ್.ಬಿ.ಜಿ.ಎನ್. ವಕೀಲರಿಂದಃ**

1. ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಚಾಸಾ-1 ರವರಿಂದ ಸುಳ್ಳು ದೂರನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಕೃತ್ಯೆ ಸ್ಥಳದ ಮತ್ತು ಜಪ್ತು ಪಂಚನಾಮೆಗಳನ್ನು ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಯಾವುದೇ ಆರೋಪಗಳು ನನ್ನ ತನಿಖಾವಧಿಯಲ್ಲಿ ಕಂಡು ಬರದೇ ಇದ್ದರೂ ಕೂಡ ಚಾಸಾ-1 ರವರಿಗೆ ಸಹಾಯ

ಮಾಡಲು ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**